(ಸದನವು 1 ಘಂಟೆ 30 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ಎರಡು ಘಂಟೆ ಹದಿನೈದು ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿ ಪದ್ಮರಾಜಯ್ಯ ಎಂಬುವರ ಕೊಲೆ ಬಗ್ಗೆ.

(ಸದನವು 2-25ಕ್ಕೆ ಮತ್ತೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಬಿ.ಎಸ್. ಯಡಿಯೂರಪ್ಪ:- (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವೆಲ್ಲ ದಿಗ್ಭ್ರಮೆ ಪಡತಕ್ಕಂಥ ಒಂದು ಘಟನೆಯ ಸುದ್ದಿ ಈಗ ತಾನೇ ಬಂದಿದೆ. 5-7-90ರಂದು ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿ ಪದ್ಮರಾಜಯ್ಯ ಎನ್ನುವವರನ್ನು ಕೊಲೆ ಮಾಡಿ ಉದ್ದೇಶಪೂರ್ವಕವಾಗಿ ರುಂಡಮುಂಡವನ್ನು ಬೇರೆ ಕಡೆ ಇಟ್ಟು ಆ ತಲೆಯನ್ನು ತೆಗೆದುಕೊಂಡು ರಾತ್ರಿ 11 ಗಂಟೆಯಲ್ಲಿ ಬ್ಯಾಗಿನಲ್ಲಿ ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಸಿಕ್ಕಿಬಿದ್ದಿದ್ದಾನೆ. ನಾಳೆ ಬೆಳ್ಳೂರಿನಲ್ಲಿ ಊರು ಬಂದ್ ಇದೆ, ಮೌನ ಮೆರವಣಿಗೆ ಬೇರೆ ಇಟ್ಟುಕೊಂಡಿದ್ದಾರೆ. ಸಾವಿರಾರು ಜನ ಅಲ್ಲಿ ಸೇರಿ ದೊಡ್ಡ ಗಲಾಟೆಯಾಗುವ ಸಂಭವ ಇದೆ. ಇದುವರೆಗೂ ಛಾರ್ಜ್ ಷೀಟನ್ನು ಹಾಕಿಲ್ಲ. ರಾತ್ರಿ 11 ಘಂಟೆಯಲ್ಲಿ ಕೊಲೆ ಮಾಡಿ ಆ ರುಂಡವನ್ನು ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ರಸ್ತೆಯಲ್ಲಿ ಇದ್ದಂಥ ಗೂರ್ಖ ಇದೇನು ಎಂದು ಹಿಡಿಯತಕ್ಕಂಥ ಪ್ರಯತ್ನವನ್ನು ಮಾಡಿದ್ದಾನೆ. ಆಗ ಜನ ತುಂಬಿಕೊಂಡಿದ್ದಾರೆ. ಏತಕ್ಕೆ ಅವನನ್ನು ಗೂರ್ಖಿ ಹಿಡಿದ ಎಂದರೆ ಅವನ ಬಗ್ಗೆ ಅನುಮಾನ ಇತ್ತು. ಅವನ ಮೇಲೆ ಅನೇಕ ಕಳ್ಳತನದ ಆರೋಪ ಬೇರೆ ಇತ್ತು. ಅಲ್ಲಿ ಗಲಾಟೆಯಾದ ಮೇಲೆ ಆತ ಮನೆ ಕಡೆ ಓಡಿದಾಗ ಈ ಗೂರ್ಖಿ ಆಟ್ಟಿಸಿಕೊಂಡು ಹೋಗಿದ್ದಾನೆ.

ಉಪಾಧ್ಯಕ್ಷಿಣಿಯವರು:- ಈಗ....

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ಅತ್ಯಂತ ಪ್ರಮುಖವಾದ ವಿಷಯ. ಇದನ್ನು ಸರ್ಕಾರದ ಗಮನಕ್ಕೆ ತರಬೇಕು. ಇವತ್ತು ನಾವೆಲ್ಲರೂ ಹೊರಟುಹೋಗುತ್ತಿದ್ದೇವೆ. ಬೇರೆ ಏನೂ ಇಲ್ಲ. ಈಗ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಇದುವರೆಗೆ ಆಪರಾಧಿ ಮನೆಯ ಹತ್ತಿರ ಈ ರುಂಡವನ್ನು ಬಿಸಾಕಿ ಹೋದಾಗ 11 ಘಂಟೆಯಲ್ಲಿ ಈ ಘಟನೆ ನಡೆದಿದೆ. 12 ಘಂಟೆಗೆ ಇವತ್ತು ದೂರನ್ನು ಕೊಟ್ಟಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಪದ್ಮರಾಜಯ್ಯನನ್ನು ಕೊಲೆಗಾರ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದಾನೆ. ಪದ್ಮರಾಜಯ್ಯನ ತಲೆ ಸಿಕ್ಕಿದಮೇಲೆ ಅವನು ಕೊಲೆಯಾಗಿರುವುದು ಗೊತ್ತಾಯಿತು. ಇಲ್ಲಿ 1982ರಲ್ಲಿ ಕೊಲೆಯಾಗಿದೆ. ಇದುವರೆಗೂ ಛಾರ್ಜ್‌ಷೀಟ್ ಪತ್ತೆಯಾಗಿಲ್ಲ. 86ರಲ್ಲಿ ಕೊಲೆಯಾಗಿರುವುದು ಇದುವರೆವಿಗೆ ಪತ್ತೆಯಾಗಿಲ್ಲ. 1986ರಲ್ಲಿ ದಲಿತಸಮಾಜದ ಏಳು ಜನ ಹೆಣ್ಣುಮಕ್ಕಳನ್ನು ಬೇರೆ ವೇಶ್ಯಾಗೃಹಕ್ಕೆ ತೆಗೆದುಕೊಂಡು ಹೋಗತಕ್ಕಂಥ ಘಟನೆ ನಡೆದು ಇದುವರೆಗೂ ಪತ್ತೆಯಾಗಿಲ್ಲ. ಎಂಟನೇ ಇಂತಹ ಹೆಣ್ಣುಮಕ್ಕಳನ್ನು ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಿದಾಗ ಸ್ವತಃ ಆದಿಚುಂಚನಗಿರಿ ಸ್ವಾಮಿಗಳು ಮಧ್ಯೆ ಪ್ರವೇಶ ಮಾಡಿ ಇಡೀ ಊರಿನಲ್ಲಿ ಆಶಾಂತಿ ಆಗುತ್ತದೆ, ಆ ಹೆಣ್ಣುಮಗಳನ್ನು ತಂದು ಕೊಡದಿದ್ದರೆ ಎಂದಾಗ ಮೂರು ದಿವಸದಲ್ಲಿ ತಂದು ಕೊಡುತ್ತೇನೆ ಎಂದುಹೇಳಿದ್ದಾರೆ. ಅಂದರೆ ವ್ಯವಸ್ಥಿತವಾಗಿ ಇಲ್ಲಿ ಗಲಾಟೆಗಳಾಗುತ್ತಿವೆ. ಕೊಲೆ ಸುಲಿಗೆಗಳಾಗುತ್ತಿವೆ. ರಾಜಕಾರಣಿಗಳ ಪ್ರಭಾವದಿಂದ ಇದನ್ನು ಮುಚ್ಚಿ ಹಾಕುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಉಪಾಧ್ಯಕ್ಷೆಣಿಯವರು: ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಹತ್ತಿರ ಏನೇನು ಇದರ ಬಗ್ಗೆ ವಿವರಗಳು ಇವೆ, ಆದೆಲ್ಲವನ್ನು ನನಗೆ ಕಳುಹಿಸಿಕೊಡಿ. ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇಡೀ ರಾಜ್ಯವೇ ಈ ಬಗ್ಗೆ ದಿಗ್ಭ್ರಮೆಪಡುತ್ತಿದೆ. ಇಲ್ಲಿ ಹೆಣ ರಸ್ತೆಯಲ್ಲಿ ಬಿದ್ದಿಲ್ಲ. ರುಂಡ, ಕೈ ಕಾಲುಗಳು ಇನ್ನೂ ಇದುವರೆಗೆ ಸಿಕ್ಕಿಲ್ಲ. ಆ ತಲೆಯನ್ನು ಕೈಚೀಲದಲ್ಲಿ ತೆಗೆದುಕೊಂಡು ಹೋಗತಕ್ಕಂಥ ಧೈರ್ಯವನ್ನು ಅಪರಾಧಿ ಮಾಡಿದ್ದಾನೆ. ಗೂರ್ಖ ಇಲ್ಲದಿದ್ದರೆ ಸಿಗುತ್ತಿರಲಿಲ್ಲ. ಜನ ನೋಡಿದ್ದಾರೆ. ಕಂಪ್ಲೇಂಟನ್ನು ಕೊಟ್ಟು ಇಷ್ಟು ಹೊತ್ತಾದರೂ ಸಹಾ ಛಾರ್ಜ್‌ಷೀಟ್ ಫೈಲ್ ಮಾಡುವುದಕ್ಕೆ ಆಲ್ಲಿರುವಂಥ ರಾಜಕಾರಣಿಗಳು ಬಿಟ್ಟಿಲ್ಲ. ಅನೇಕ ಹಿರಿಯ ಮುಖಂಡರುಗಳ ಕೈವಾಡ ಇದೆ. ಅದಕ್ಕಾಗಿ ನಾನು ಇಲ್ಲಿ ಒತ್ತಾಯ ಮಾಡತಕ್ಕಂಥದ್ದು ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕು. ನ್ಯಾಯವಾಗಿ ನಾವು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಅವರೇ ಸ್ಟೇಟ್‌ಮೆಂಟನ್ನು ಮಾಡಬೇಕಾಗಿತ್ತು. ಪೋಲೀಸ್ ಸಿ.ಐ.ಡಿ.ಗಳಿಂದ ಸರ್ಕಾರಕ್ಕೆ ವರದಿ ಬಂದಿರಬೇಕು. ಇಂಥ ವಿಚಿತ್ರ ಘಟನೆ ನಡೆದಿರಬೇಕಾದರೆ ಅದು ಇದುವರೆಗೂ ಪತ್ರಿಕೆಯಲ್ಲಿ ಬಂದಿಲ್ಲ. ಆಂದರೆ ಉದ್ದೇಶವೇನು? ಪೋಲೀಸರು ಶಾಮಿಲಾಗಿ ಅದನ್ನು ಮುಚ್ಚಿ ಹಾಕತಕ್ಕಂಥ ಪ್ರಯತ್ನ, ಈ ಒಂದು ಕೊಲೆಯಲ್ಲಿ ಅನೇಕ ಪ್ರಮುಖರ ಕೈವಾಡ ಇರುವುದರಿಂದ ವ್ಯವಸ್ಥಿತವಾದ ಒಂದು ಸಂಚು ಇದೆ. ಸರ್ಕಾರದ ಪೋಲೀಸ್ ಅಧಿಕಾರಿಗಳು ಇದರಲ್ಲಿ ಭಾಗಿಗಳಾಗಿದ್ದಾರೆ. ಯಾರ್ಯಾರ ಜೊತೆಯಲ್ಲಿ ಭಾಗಿಗಳಾಗಿದ್ದಾರೆ ಎಂದು ಗೊತ್ತಿಲ್ಲ. ನಾನು ಇಲ್ಲಿ ಪ್ರಸ್ತಾಪ ಮಾಡುವುದು ಒಂದೇ ಒಂದು ಉದ್ದೇಶದಿಂದ, ಅದೇನೆಂದರೆ 5-7-90ರಂದು, ಈ ಘಟನೆ ನಡೆದಿದ್ದರೂ ಸಹ ಅದು ಪತ್ರಿಕೆಯಲ್ಲಿ ಬಂದಿಲ್ಲ.

ಉಪಾಧ್ಯಕ್ಷೆಣಿಯವರು:- ಆಯಿತು. ತಾವು ಸಾಕಷ್ಟು ಹೇಳಿದ್ದೀರಿ, ಅದು ಬರೆದು ಕಳುಹಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಇಂಥ ವಿಷಯವನ್ನು ಬರೆದು ಕಳುಹಿಸುವಂಥ ಅಗತ್ಯವಿಲ್ಲ. ನಾನು ಏನು ಹೇಳುವುದು ಎಂದರೆ ತಾವು ಸರ್ಕಾರದಿಂದ....

ಉಪಾಧ್ಯಕ್ಷೆಣಿಯವರು:- ತಾವು ನನ್ನ ಗಮನಕ್ಕೆ ತಂದಿದ್ದೀರಿ, ಅದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸರ್ಕಾರದಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಬೆಳಿಗ್ಗೆ ತುಮಕೂರಿನ ಲಾಕಪ್‌ನಲ್ಲಿ ಒಂದು ಡೆತ್ ಆಗಿದೆ ಎಂದು ಹೇಳಿದೆವು. ಆಗ ಸಭೆಯಲ್ಲಿ ಸರ್ಕಾರ ಪ್ರೊರ್ತಿ ಇತ್ತು. ಮುಖ್ಯಮಂತ್ರಿಗಳು ಅದರ ಬಗ್ಗೆ ಚಕಾರ ಎತ್ತಲಿಲ್ಲ, ಏನು ಮಾಡುವುದು?

ಉಪಾಧ್ಯಕ್ಷೆಣಿಯವರು:- ಅವರು ಈ ವಿಷಯವನ್ನು ಈಗ ತಾನೇ ನನ್ನ ಗಮನಕ್ಕೆ ಅಥವ ಸಭೆಯ ಗಮನಕ್ಕೆ ತರುತ್ತಿದ್ದಾರೆ. ಈ ವಿಷಯವನ್ನು ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನ್ನ ಕಳಕಳಿ ಏನೆಂದರೆ ಈ ನಿಮಿಷಕ್ಕೆ ಇದ ನಡೆದಿರುವಂಥದ್ದು ಆಲ್ಲ. ನನಗೆ ಗಾಬರಿ ಉಂಟಾಗಿದೆ. 5-7-90ರಂದು ಈ ಘಟನೆ ನಡೆದ ಮೇ ಇವತ್ತಿನವರೆಗೂ ಛಾರ್ಜ್‌ಷೀಟ್ ಹಾಕಿಲ್ಲ. ಇದುವರೆಗೂ ಅಪರಾಧಿಯನ್ನು ಹಿಡಿಯಲಿಲ್ಲ. ತಲೆ ಭಾಗ ಮಾತ್ರ ಪೋಲೀಸರಿಗೆ ಸಿಕ್ಕಿದೆ. ಉಳಿದ ಕೈಕಾಲು ಇತರೆ ದೇಹದ ಭಾಗ ಎಲ್ಲಿದೆ ಎಂದು ಗೊತ್ತಿಲ್ಲ ಪೋಲೀಸ್ ಇಲಾಖೆ ಎಲ್ಲಿ ಬದುಕಿದೆಯೇ? ಇವತ್ತು ಈ ರೀತಿ ಅಮಾನುಷವಾಗಿ ಕೊಲೆಯಾದ ಅಲ್ಲಿ ಬೇರೆಜನ ಬರುವುದಕ್ಕೆ ಸಾಧ್ಯವೇ? ಇವತ್ತು ಕಳ್ಳತನ ಮಾಡುವಂಥ ಅಪರಾಧಿ ಎಂದ ತಿಳಿದುಕೊಂಡು ಅನುಮಾನ ಪಟ್ಟು ಅವನನ್ನು ಹಿಡಿದಿದ್ದರಿಂದ ಇವತ್ತು ಪತ್ತೆಯಾಯಿತು. ಸಹಜವಾ ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿ 5-7-90ರಂದು ಬೆಳಿಗ್ಗೆ 11 ಗಂಟೆಗೆ ಪದ್ಮರಾಜಯ್ಯನನ ಕರೆದುಕೊಂಡು ಹೋಗಿದ್ದಾನೆ. ಕರೆದುಕೊಂಡು ಹೋಗಿ ಕೊಲೆಗಾರನೇ ಮನೆಯ ಹತ್ತಿ

ಕರೆದುಕೊಂಡು ಹೋಗಿ ಕೊಲೆ ಮಾಡಿ ಮನೆಯಿಂದ ರುಂಡವನ್ನು ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನವನ್ನು ಮಾಡಿದ್ದಾನೆ.

ಉಪಾಧ್ಯಕ್ಷಿಣಿಯವರು:- ಯಡಿಯೂರಪ್ಪನವರೇ, ತಾವು ನಮಗೆ ಬೆಳಿಗ್ಗೇನೂ ಏನು ತಾವು ಬರೆದು ಕಳುಹಿಸಿಲ್ಲ. ಈಗ ಆ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದೀರಿ, ಇದನ್ನು ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಒತ್ತಾಯ ಮಾಡತಕ್ಕಂಥದ್ದು ಏನೆಂದರೆ ಸಾಯಂಕಾಲದ ಒಳಗಡೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೋಂ ಡಿಪಾರ್ಟ್‌ಮೆಂಟ್‌ನಿಂದ ಇನ್‌ಫರ್ಮೇಷನ್ ತರಿಸಿ ನಮಗೆ ಹೇಳಬೇಕು. ಆವನನ್ನು ಇದುವರೆಗೂ ಅರೆಸ್ಟ್ ಮಾಡಿದ್ದಾರೆಯೊ ಇಲ್ಲವೋ ಗೊತ್ತಿಲ್ಲ. ಇದನ್ನು ನಾನು ಪತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಾನು ನನ್ನ ಡ್ಯೂಟಿಯನ್ನು ಮಾಡುತ್ತಿದ್ದೇನೆ. ನಾಳೆ ಬೆಳಿಗ್ಗೆ ಅಲ್ಲಿ ಮೌನ ಮೆರವಣಿಗೆ ಇದೆ. ಇಡೀ ಬೆಳ್ಳೂರಿನ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಇಡೀ ಸಮಾಜ ತಿರುಗಿ ಬಿದ್ದಿದೆ. ಪೋಲೀಸ್ ಇಲಾಖೆಯ ಮೇಲೆ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದರಿಂದ ಇಡೀ ರಾಜ್ಯದಲ್ಲಿ ಆಶಾಂತಿಯ ವಾತಾವರಣ ಉಂಟಾಗುವಂತಹ ಒಂದು ಪ್ರಯತ್ನ ಆಗುತ್ತದೆ.

ಉಪಾಧ್ಯಕ್ಷರು:- ಆಯಿತು; ತಾವು ಗಮನಕ್ಕೆ ತಂದಿದ್ದೀರಿ; ಆದನ್ನು.....

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ನನಗೆ ಆಶ್ವಾಸನೆ ಕೊಡಬೇಕು. ನೀವು ನಮ್ಮ ರಕ್ಷಣೆಗೆ ಬರಬೇಕು. ಆದ್ದರಿಂದ ಸದನದ ನಾಯಕರು ಇಲ್ಲದೇ ಇದ್ದರೆ ಬೇರೆ ಮಂತ್ರಿಗಳು ಉತ್ತರ ಹೇಳಲಿ. ಈ ಹಿನ್ನೆಲೆಯ ವಿಷಯ ಸರ್ಕಾರಕ್ಕೆ ಗೊತ್ತಿದೆಯೋ ಆಥವಾ ಇಲ್ಲವೋ? ಆಥವಾ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಇನ್ನು ಒಂದು ಗಂಟೆ ಬಿಟ್ಟು ಸ್ಟೇಟ್‌ಮೆಂಟ್ ಮಾಡಲಿ; ನಾನು ಈಗಲೇ ಹೇಳಿಕೆ ಕೊಡಲಿ ಎಂದು ಹೇಳುವುದಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಆಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನ ಗ್ರಾಮ ಒಂದರಲ್ಲಿ ಪದ್ಮರಾಜಯ್ಯ ಎಂಬುವರ ಕೊಲೆ ಆಗಿದೆ; ಇದುವರೆಗೆ ಪೋಲೀಸರು ಇದರ ಬಗ್ಗೆ ಯಾವುದೇ ಕಾನೂನು ರೀತ್ಯಾ ಕ್ರಮ ಕೈಗೊಂಡಿಲ್ಲ ಎಂದು ಹೇಳಿದ್ದಾರೆ. ನಾಳೆ ಮೌನ ಮೆರವಣಿಗೆ ಇದೆ; ತೀವ್ರವಾದ ಒಂದು ಪ್ರಕರಣ ನಡೆದಿದೆ ಎನ್ನತಕ್ಕ ರೀತಿಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಈ ಬಗ್ಗೆ ತಾವು ಈಗಾಗಲೇ ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಇದನ್ನು ಏಕಾ ಏಕಿಯಾಗಿ ಪ್ರಸ್ತಾಪ ಮಾಡಿದ್ದಾರೆ. ತಾವು ಪ್ರಸ್ತಾಪ ಮಾಡಿರುವ ವಿಷಯವನ್ನು ನಾನು ಗೃಹ ಖಾತೆಯ ಸಂಬಂಧಪಟ್ಟವರಿಗೆ ತಿಳಿಸಿ ಇದರ ಬಗ್ಗೆ ಆದಷ್ಟು ಬೇಗ ಈ ಸಂಜೆಯೊಳಗೆ ಇದರ ಬಗ್ಗೆ ಮಾಹಿತಿ ಪಡೆದು.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ಸ್ಟೇಟ್‌ಮೆಂಟ್ ಮಾಡಿ.....

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಸ್ಟೇಟ್‌ಮೆಂಟ್ ಆಗುತ್ತದೊ ಆಥವಾ ಇಲ್ಲವೋ ಗೊತ್ತಿಲ್ಲ, ತಮಗೆ ವಿಚಾರ ಏನಿದೆ ಎಂಬುದನ್ನು ತಿಳಿಸುತ್ತೇನೆ. Madam Dy.Speaker, I can assure on the Floor of the House that I will bring this matter to the concerned in the Home Department. Kindly take the Government into confidence.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸರ್ಕಾರ ಎಂದರೆ ಕೊಲೆ ಸುಲಿಗೆ ಆದ ತಕ್ಷಣ ವಿಷಯ ತಿಳಿದುಕೊಂಡಿರಬೇಕು. ಆದರೆ ಈ ಘಟನೆ ನಡೆದಿರುವುದು ಬಹಳ ಹಿಂದೆ ಆದ್ದರಿಂದ ಐದು ನಿಮಿಷದಲ್ಲಿ ಇನ್‌ಫರ್ಮೇಷನ್ ತರಿಸಿ ಸದನಕ್ಕೆ ಕೊಡಬಹುದು.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕದ್ದು ನಿಜಕ್ಕೂ ಪ್ರಮುಖವಾದ ವಿಷಯ. ಬಹಳ ಆದ್ಯತೆ ಮೇಲೆ ಇಂತಹ ವಿಷಯದಲ್ಲಿ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ. ಆದ್ದರಿಂದ.....

ಶ್ರೀ ಬಿ.ಎಸ್. ಯಡಿಯೂರಪ್ಪ:– ಸ್ಟೇಟ್‌ಮೆಂಟ್ ಮಾಡಿ ಅಥವಾ ಏನಾದರೂ ವಿವರ ನನಗೆ ಕೊಡಿ. ನಾನು ಹೇಳಿರುವುದಕ್ಕೆ ಹೊರಟಿರುವಂತಾದ್ದು ಏನು ಎಂದರೆ 5.7.90ರಂದು ನಡೆದಿರುವ ಘಟನೆ ಇದು. ಇದು ಡಿಲೇ ಆಗುತ್ತಾ ಹೋದರೆ, ಕೊಲೆಗಾರ ತಪ್ಪಿಸಿಕೊಳ್ಳುತ್ತಾನೆ, ಸಾಕ್ಷ್ಯಾಧಾರಗಳು ಸಿಗುವುದಿಲ್ಲ. ಇಲ್ಲಿ ಪ್ರಭಾವಿ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಈ ಒಂದು ಕೊಲೆ ಸಂದರ್ಭದಲ್ಲಿ ಸಂಬಂಧಪಟ್ಟಿರುವುದರಿಂದ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇದು ಮೊದಲನೆಯ ಘಟನೆ ಅಲ್ಲ. ಮೂರು ಈ ರೀತಿ ಕೊಲೆಗಳು ಅಲ್ಲಿ ಆಗಿದೆ. ಆರೇಳು ಜನ ಈ ರೀತಿ ಜೈನ ಸಮಾಜದ ಹೆಣ್ಣು ಮಕ್ಕಳನ್ನು ವ್ಯಭಿಚಾರಕ್ಕೋಸ್ಕರ ಹೊರಗಡೆ ಕರೆದುಕೊಂಡು ಹೋಗಿದ್ದಾರೆ. ಆದಿಚುಂಚನಗಿರಿ ಸ್ವಾಮಿಗಳು ಅಲ್ಲಿಗೆ ಬಂದು ಎಂಟನೇ ಹೆಣ್ಣು ಮಗಳನ್ನು ಈ ರೀತಿ ಹೊತ್ತುಕೊಂಡು ಹೋಗುವಂತಹ ಪ್ರಯತ್ನ ನಡೆದಾಗ ಅವರು ಮಧ್ಯೆ ಪ್ರವೇಶ ಮಾಡಿ ಆದೇ ಊರಿನಲ್ಲಿಯೇ ಉಳಿದುಕೊಂಡು, ಮೂರು ದಿವಸದೊಳಗೆ ಹೆಣ್ಣು ಮಕ್ಕಳನ್ನು ವಾಪಸ್ ತರದೇ ಹೋದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿದ ಮೇಲೆ ವ್ಯಭಿಚಾರಕ್ಕೋಸ್ಕರ ಹಿಡಿದುಕೊಂಡು ಹೋಗಿದ್ದವಳನ್ನು ವಾಪಸ್ ತಂದು ಬಿಟ್ಟಿದ್ದಾರೆ. ಈ ರೀತಿ ಪದೇ ಪದೇ ಈ ಘಟನೆ ನಡೆದಿದೆ. ಉದ್ದೇಶ ಪೂರ್ವಕವಾಗಿ ವ್ಯವಸ್ಥಿತವಾಗಿ ಕೊಲೆ ಆಗುತ್ತಿದೆ. ಅನೇಕ ಪ್ರಭಾವ ವ್ಯಕ್ತಿಗಳ ಕೈವಾಡದಿಂದ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆಯುತ್ತಾ ಇರಬೇಕಾದರೆ, ನಾಳೆ ಅಲ್ಲಿ ಅಶಾಂತಿಯ ವಾತಾವರಣ ಉಂಟಾಗುತ್ತಿದೆ. ಅಲ್ಲಿ ಶಾಂತಿಯ ವಾತಾವರಣ ಬರಬೇಕಾಗಿದೆ. ಅಲ್ಲಿನ ಪೋಲೀಸ್ ಅಧಿಕಾರಿ ಆ ರುಂಡ ಅವನ ಮನೆ ಮುಂದೆ ಸಿಕ್ಕಿರಬೇಕಾದರೆ ಅವನ ಮನೆಯನ್ನು ಜಪ್ತಿ ಮಾಡಿದ್ದಾರೆ. ಅನೇಕ ಕಳ್ಳತನದ ಸಾಮಾನುಗಳು ಅವನ ಮನೆಯಲ್ಲಿ ಸಿಕ್ಕಿದೆ. ನಾನು ಹೇಳುವಂತಾದ್ದು ಹೀಗಿರಬೇಕಾದರೆ ಸರ್ಕಾರ ಇದುವರೆಗೆ ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡದೇ ಇರುವಂತಾದ್ದು ಸರಿಯಲ್ಲ. ಅರೆಸ್ಟ್ ಸಹ ಮಾಡಿಲ್ಲ. ಎಲ್ಲದಕ್ಕೂ ಸ್ಟೇಟ್‌ಮೆಂಟ್ ಮಾಡಬೇಕಾಗಿಲ್ಲ. ಆದರೆ, ನನಗೆ ಏನು ಭಯ ಅಂದರೆ ಇದುವರೆಗೆ ಅರೆಸ್ಟ್ ಮಾಡಿಲ್ಲ. ಕಂಪ್ಲೈಟ್ ಕೊಟ್ಟಿದ್ದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದು ನಮಗೆ ಭಯ ತಂದಿರುವಂತಹದು. ದಯವಿಟ್ಟು ಈ ಬಗ್ಗೆ ವಿವರ ಬೇಕು;

ಶ್ರೀ ಟಿ.ಎನ್. ನರಸಿಂಹ ಮೂರ್ತಿ:– ನಾನು ಸರ್ಕಾರದ ವತಿಯಿಂದ ಏನು ಪುನರುಚ್ಚಾರ ಮಾಡುತ್ತೇನೆಂದರೆ, ಈ ಸಂಜೆಯೊಳಗೆ ನಾನು ಗೃಹ ಖಾತೆಯ ಕಾರ್ಯದರ್ಶಿಗಳಿಗೆ ಮತ್ತು ಡೈರಕ್ಟರ್ ಜನರಲ್ ಆಫ್ ಪೋಲೀಸ್ ಅವರಿಗೆ ಹೇಳಿ ಈ ಒಂದು ಬೆಳ್ಳೂರಿನಲ್ಲಿ ನಡೆದಿರತಕ್ಕ ಕೊಲೆ ಪ್ರಕರಣ ಏನು ಇದೆ, ಅದರ ಬಗ್ಗೆ ಶೀಘ್ರವಾಗಿ ತನಿಖೆ ಮಾಡಬೇಕು ಮತ್ತು ಈಗಾಗಲೇ ಏನಾದರೂ ಮಾಹಿತಿ ಸಿಕ್ಕಿದ್ದರೆ ಅದನ್ನು ಸರ್ಕಾರಕ್ಕೆ ಕಳಿಸಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀಯಡಿಯೂರಪ್ಪನವರು ಒಂದು ಮಾತನ್ನು ಆತುರದಲ್ಲಿ ಮಾತನಾಡುವಾಗ ಹೇಳಿದರು, ಇಲ್ಲಿ ಪೋಲೀಸ್ ಇಲಾಖೆ ಬದುಕಿದೆಯಾ ಎಂದು. ಪೋಲೀಸ್ ಇಲಾಖೆ ಏನಾದರೂ ಸತ್ತರೆ ನಾವು ಯಾರೂ ಇಲ್ಲಿ ಗೌರವಯುತವಾಗಿ ಬರುವುದಕ್ಕೆ ಸಾಧ್ಯ ಇಲ್ಲ. ಇಲಾಖೆ ಬದುಕಿದೆ ಕರ್ತವ್ಯ ಲೋಪ ಆಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಮತ್ತು ಅದನ್ನು ಫುಲ್ ಅಪ್ ಮಾಡೋಣ. ಸತ್ಯವಾದ ಮಾಹಿತಿಯನ್ನು ತರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು:– ಈಗ 68ರ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯನ್ನು ಮಾನ್ಯ ಚಂದ್ರೇಗೌಡರು ಪ್ರಾರಂಭ ಮಾಡಬಹುದು

ವಿಷಯ: ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದವರು ಸರ್ವೆ ನಂ.839ಬಿ, 839ಸಿ, 841ಎ, 841ಬಿ, ಜಮೀನಿನಲ್ಲಿ ನಿವೇಶನಗಳನ್ನು ಹಂಚಿರುವುದರ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷೆಣಿ ಅವರೇ ಇದು ಒಂದು ಸಾರ್ವಜನಿಕ ಮಹತ್ವದ ವಿಚಾರ ಚರ್ಚೆ ಮಾಡಬೇಕು ಎಂದು ಹೇಳಿ ನಾನು 16